**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72 ರಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:** " ಕೋಲಾರ ಜಿಲ್ಲೆ ಮೊದಲಿನಿಂದಲೂ ವಕೀಲಿ ವೃತ್ತಿಯನ್ನು ಬಹಳ ಹೆಚ್ಚಿನ ಕಾನೂನು ಪದವೀಧರರು ತಮ್ಮ ಹತ್ತಿರದ ಜಿಲ್ಲೆಯಾದ ಬೆಂಗಳೂರಿನಲ್ಲಿ ಪಡೆಯುತ್ತಿದ್ದರು, ಈ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೋಲಾರದ ಹತ್ತಿರ ಇರುವ ಅರಹಳ್ಳಿಯಲ್ಲಿ ಸರ್ಕಾರಿ ಕಾನೂನು ಕಾಲೇಜನ್ನು ಪ್ರಾರಂಭಿಸಲಾಗಿದೆ.

ಸದರಿ ಶಿಕ್ಷಣ ಸಂಸ್ಥೆಯು ಅರಹಳ್ಳಿ ಗ್ರಾಮದಲ್ಲಿದ್ದು ಈ ಗ್ರಾಮಕ್ಕೆ ಯಾವುದೇ ರೀತಿಯ ಬಸ್ಸು ಹಾಗೂ ಇತರೆ ವಾಹನ ಸಂಚಾರ ಸೌಲಭ್ಯವಿರುವುದಿಲ್ಲ. ಸದರಿ ಕಾನೂನು ಕಾಲೇಜಿಗೆ ಕಾಂಪೌಂಡು, ಮೂಲಭೂತ ಸೌಕರ್ಯಗಳು ಇಲ್ಲದೆ ವಂಚಿತರಾಗಿದ್ದು, ಇದರೊಂದಿಗೆ ಕಟ್ಟಡಗಳ ನಿರ್ವಹಣೆ ಇಲ್ಲದೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಬಹಳ ಅನಾನುಕೂಲವಾಗಿರುವುದಲ್ಲದೇ ಬಹಳ ಹೆಚ್ಚಿಗೆ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ವಸತಿ ನಿಲಯದ ವ್ಯವಸ್ಥೆ ಸಹ ಇರುವುದಿಲ್ಲ. ಆದ್ದರಿಂದ ವಕೀಲಿ ವೃತ್ತಿಗೆ ಹೆಸರುವಾಸಿಯಾದ ಕೋಲಾರದ ಕಾನೂನು ಕಾಲೇಜಿಗೆ ಈ ಕೂಡಲೇ ಮೂಲಭೂತ ಸೌಲಭ್ಯ, ಬೋಧಕ / ಬೋಧಕೇತರ ಸಿಬ್ಬಂದಿಯನ್ನು ಹಾಗೂ ವಾಹನ ಸೌಕರ್ಯವನ್ನು ಸಹ ಒದಗಿಸಿಕೊಟ್ಟು, ವಿದ್ಯಾರ್ಥಿ / ವಿದ್ಯಾರ್ಥಿನಿಯರ ವಸತಿ ನಿಲಯವನ್ನು ನಿರ್ಮಾಣ ಮಾಡಲು ಸರ್ಕಾರ ಈ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದ್ದು, ಇದಕ್ಕಾಗಿ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಗಮನ ಸೆಳೆಯಬಯಸುತ್ತೇನೆ.".

**ಉತ್ತರ:**

ಕೋಲಾರದ ಸರ್ಕಾರಿ ಕಾನೂನು ಕಾಲೇಜನ್ನು 1996ರಲ್ಲಿ ಪ್ರಾರಂಭಿಸಲಾಗಿರುತ್ತದೆ.

| **ಲಭ್ಯವಿರುವ ಕೋರ್ಸುಗಳು** | **ಮಹಿಳಾ ವಿದ್ಯಾರ್ಥಿಗಳು** | **ಪುರುಷ ವಿದ್ಯಾರ್ಥಿಗಳು** | **ಒಟ್ಟು ವಿದ್ಯಾರ್ಥಿ ಸಂಖ್ಯೆ** |
|---|---|---|---|
| ಐದು ವರ್ಷಗಳ ಕಾನೂನು ಪದವಿ | 146 | 108 | 254 |

**ಬೋಧಕ / ಬೋಧಕೇತರ ಸಿಬ್ಬಂದಿ ವಿವರ**

| **ವಿಷಯ** | **ಮಂಜೂರಾದ ಹುದ್ದೆ** | **ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ** | **ಖಾಲಿ ಹುದ್ದೆ** |
|---|---|---|---|
| **ಬೋಧಕರು** | | | |
| ಪ್ರಾಂಶುಪಾಲರು | 01 | 00 | 01 |
| ಕನ್ನಡ | 00 | 00 | 00 |
| ಇತಿಹಾಸ | 00 | 00 | 00 |
| ಕಾನೂನು | 11 | 07 | 04 |
| ರಾಜ್ಯಶಾಸ್ತ್ರ | 01 | 00 | 01 |
| ಸಮಾಜಶಾಸ್ತ್ರ | 01 | 01 | 00 |
| ದೈಹಿಕ ಶಿಕ್ಷಣ | 01 | 01 | 00 |
| ಗ್ರಂಥಪಾಲಕರು | 01 | 00 | 01 |
| **ಒಟ್ಟು** | **16** | **09** | **07** |
| ಅತಿಥಿ ಉಪನ್ಯಾಸಕರು | **00** | **03** | **00** |

| ಬೋಧಕೇತರರು | | | |
|---|---|---|---|
| ಅಧೀಕ್ಷಕರು | 01 | 01 | 00 |
| ಪ್ರಥಮ ದರ್ಜೆ ಸಹಾಯಕರು | 01 | 00 | 01 |
| ದ್ವಿತೀಯ ದರ್ಜೆ ಸಹಾಯಕರು | 02 | 00 | 02 |
| ಬೆರಳಚ್ಚುಗಾರರು | 01 | 00 | 01 |
| ಗ್ರಂಥಾಲಯ ಸಹಾಯಕರು | 01 | 00 | 01 |
| ಅಟೆಂಡರ್ | 02 | 01 | 01 |
| ಪರಿಚಾರಕರು | 02 | 00 | 02 |
| **ಒಟ್ಟು** | **10** | **02** | **08** |

**ಖಾಲಿ ಇರುವ ಬೋಧಕ ಹುದ್ದೆಗಳಿಗೆ** ಇಲಾಖೆಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ವಿವಿಧ ವಿಷಯಗಳಲ್ಲಿ 1242 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಸದರಿ ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಗೊಳಿಸುವ ಸಂದರ್ಭದಲ್ಲಿ ಸದರಿ ಕಾಲೇಜಿನಲ್ಲಿ ಖಾಲಿ ಇರುವ ಕಾನೂನು ವಿಷಯ 04, ರಾಜ್ಯಶಾಸ್ತ್ರ-01 (ಪ್ರಾಂಶುಪಾಲರು & ಗ್ರಂಥಪಾಲಕರ ಹುದ್ದೆ ಹೊರತುಪಡಿಸಿ) ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು. ಮುಂದುವರೆದು, ವಿವಿಧ ವಿಷಯಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಪಾಠ-ಪ್ರವಚನಗಳನ್ನು ನಡೆಸಲಾಗುತ್ತಿದೆ.

**ಬೋಧಕೇತರ ಹುದ್ದೆಗಳಲ್ಲಿ** ಇಲಾಖೆಯಲ್ಲಿನ ಪ್ರಥಮ ದರ್ಜೆ ಸಹಾಯಕರ 123 ಹುದ್ದೆಗಳು ಮತ್ತು ದ್ವಿತೀಯ ದರ್ಜೆ ಸಹಾಯಕರ 88 ಹುದ್ದೆಗಳು ಒಟ್ಟು 211 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಆಯೋಗವು ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಇದರಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಸಂಬಂಧಿಸಿದಂತೆ, ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆಯ್ಕೆ ಪಟ್ಟಿಯನ್ನು ನೀಡಿದ್ದು, ದಾಖಲಾತಿಗಳ ಪರಿಶೀಲನೆ ಪ್ರಗತಿಯಲ್ಲಿದೆ. ಉಳಿದಂತೆ, ದ್ವಿತೀಯ ದರ್ಜೆ ಸಹಾಯಕರ ಆಯ್ಕೆಪಟ್ಟಿ ಇನ್ನೂ ಸ್ವೀಕೃತವಾಗಬೇಕಿರುತ್ತದೆ. ಪ್ರಕ್ರಿಯೆ ಪೂರ್ಣಗೊಂಡ ನಂತರ ಸದರಿ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುವುದು ಹಾಗೂ ಖಾಲಿ ಇರುವ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕ್ರಮವಹಿಸಲಾಗುತ್ತಿದೆ.

**ಕಳೆದ 05 ಐದು ವರ್ಷಗಳಲ್ಲಿ ನಿರ್ಮಾಣ ಕಾಮಗಾರಿಗಳಿಗಾಗಿ ನೀಡಲಾದ ಅನುದಾನದ ವಿವರ**

| 2018-19ನೇ ಸಾಲಿನಲ್ಲಿ | (ರೂ. ಲಕ್ಷಗಳಲ್ಲಿ) |
|---|---|
| ಹೆಚ್ಚುವರಿ ತರಗತಿ ಕೊಠಡಿ ನಿರ್ಮಾಣಕ್ಕಾಗಿ | 100.00 |
| ಪ್ರಯೋಗಾಲಯ ನಿರ್ಮಾಣಕ್ಕಾಗಿ | 35.00 |
| ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕಾಗಿ | 60.00 |
| ಶೌಚಾಲಯ ನಿರ್ಮಾಣಕ್ಕಾಗಿ | 15.00 |
| **ಒಟ್ಟು** | **210.00** |
| 2018-19ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಯು ಪ್ರಸ್ತುತ Plastering ಕಾಮಗಾರಿಯ ಪ್ರಗತಿಯಲ್ಲಿರುತ್ತದೆ. | |

**ಕಳೆದ 05 ಐದು ವರ್ಷಗಳಲ್ಲಿ ಶೈಕ್ಷಣಿಕ ಮೂಲಭೂತ ಸೌಕರ್ಯಗಳಿಗಾಗಿ ನೀಡಲಾದ ಅನುದಾನದ ವಿವರ**

| ವರ್ಷ | ಮಂಜೂರು ಮಾಡಲಾದ ಅನುದಾನದ ಉದ್ದೇಶ | ಮೊತ್ತ (ರೂ. ಲಕ್ಷಗಳಲ್ಲಿ |
|---|---|---|
| 2017-18 | ಕಛೇರಿ ವೆಚ್ಚ, ಪಠ್ಯ ಪುಸ್ತಕ ಮತ್ತು ಪೀಠೋಪಕರಣ ಹಾಗೂ ಇತರೆ ವೆಚ್ಚಗಳಿಗಾಗಿ | 788162.00 |
| 2018-19 | ಕಛೇರಿ ವೆಚ್ಚ, ಪಠ್ಯ ಪುಸ್ತಕ ಮತ್ತು ಪೀಠೋಪಕರಣ ಹಾಗೂ ಇತರೆ ವೆಚ್ಚಗಳಿಗಾಗಿ | 504078.00 |
| 2019-20 | ಕಛೇರಿ ವೆಚ್ಚ, ಪಠ್ಯ ಪುಸ್ತಕ ಮತ್ತು ಪೀಠೋಪಕರಣ ಹಾಗೂ ಇತರೆ ವೆಚ್ಚಗಳಿಗಾಗಿ | 416853.00 |
| 2020-21 | ಕಛೇರಿ ವೆಚ್ಚ, ಪಠ್ಯ ಪುಸ್ತಕ ಮತ್ತು ಪೀಠೋಪಕರಣ ಹಾಗೂ ಇತರೆ ವೆಚ್ಚಗಳಿಗಾಗಿ | 38140.00 |
| 2021-22 | ಕಛೇರಿ ವೆಚ್ಚ, ಪಠ್ಯ ಪುಸ್ತಕ ಮತ್ತು ಪೀಠೋಪಕರಣ ಹಾಗೂ ಇತರೆ ವೆಚ್ಚಗಳಿಗಾಗಿ | 450900.00 |
| | **ಒಟ್ಟು** | **2198133.00** |

**ಬಸ್ಸು ಹಾಗೂ ಇತರೆ ವಾಹನ ವ್ಯವಸ್ಥೆ** ಕೋಲಾರದ ಸರ್ಕಾರಿ ಕಾನೂನು ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಕೋಲಾರ ನಗರದಿಂದ ಸುಮಾರು 10 ಕಿ.ಮೀ. ದೂರದಲ್ಲಿರುವ ಅರೆಹಳ್ಳಿಯಲ್ಲಿ ಸ್ವಂತ ಜಮೀನು ಮಂಜೂರಾಗಿದ್ದು, ಸದರಿ ಸ್ಥಳದಲ್ಲಿ ಕಾಲೇಜು ಕಾರ್ಯನಿರ್ವಹಿಸುತ್ತಿರುತ್ತದೆ. ಕೋಲಾರ ನಗರದಿಂದ ಅರೆಹಳ್ಳಿಯ ಪವರ್ ಗ್ರಿಡ್ ಗೇಟ್‌ವರೆಗೆ ಬಸ್ ಸೌಕರ್ಯವಿರುತ್ತದೆ. ಅಲ್ಲಿಂದ ಕಾಲೇಜಿಗೆ ಸುಮಾರು 02 ಕಿ.ಮೀ. ರಸ್ತೆ ಸಂಪರ್ಕ ಇದ್ದು ವಿದ್ಯಾರ್ಥಿಗಳು ನಡೆದುಕೊಂಡು ಕಾಲೇಜಿಗೆ ಬರುತ್ತಾರೆ. ಸದರಿ ಕಾಲೇಜಿನ ವಿದ್ಯಾರ್ಥಿಗಳ ಪ್ರಯಾಣಕ್ಕಾಗಿ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಲು ಸಂಬಂಧಪಟ್ಟವರಿಗೆ ಈಗಾಗಲೇ ಸೂಚನೆ ನೀಡಿ ಅಗತ್ಯ ಕ್ರಮವಹಿಸಿರುವುದಾಗಿ ಪ್ರಾಂಶುಪಾಲರು ತಿಳಿಸಿರುತ್ತಾರೆ.

ವಸತಿ ನಿಲಯದ ವ್ಯವಸ್ಥೆಗೆ ಸಂಬಂಧಿಸಿದಂತೆ, ಕೋಲಾರದ ನಗರದಲ್ಲಿ ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ 02 ಮಹಿಳಾ ವಸತಿ ನಿಲಯಗಳು, 01 ಪುರುಷ ವಸತಿ ನಿಲಯ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 01 ಮಹಿಳಾ ವಸತಿ ನಿಲಯ, 01 ಪುರುಷ ವಸತಿ ನಿಲಯಗಳು ಕಾರ್ಯ ನಿರ್ವಹಿಸುತ್ತಿರುತ್ತದೆ. ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ಕೋಲಾರ ಕಾನೂನು ಕಾಲೇಜಿನ ಸುಮಾರು 75 ವಿದ್ಯಾರ್ಥಿನಿಯರು ಮತ್ತು 60 ವಿದ್ಯಾರ್ಥಿಗಳು ಈಗಾಗಲೇ ಪ್ರವೇಶ ಪಡೆದಿರುತ್ತಾರೆ. ಇದಲ್ಲದೇ ಕಾಲೇಜು ಶಿಕ್ಷಣ ಇಲಾಖಾ ವತಿಯಿಂದ ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ ಯೋಜನೆಯಡಿ 2013-14ನೇ ಸಾಲಿನಲ್ಲಿ ಕೋಲಾರದ ಮಹಿಳಾ ಕಾಲೇಜಿನಲ್ಲಿ ರೂ.99.00 ಲಕ್ಷಗಳು ಮತ್ತು 2014-15ನೇ ಸಾಲಿನಲ್ಲಿ ರೂ.99.42 ಲಕ್ಷಗಳ ವೆಚ್ಚದಲ್ಲಿ ಮಹಿಳಾ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆಂಬ ಮಾಹಿತಿಯನ್ನು ಸಲ್ಲಿಸಿದೆ.

..4

**ಸದರಿ ಕಾಲೇಜಿನಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳ ಮಾಹಿತಿ**

| ಮೂಲಭೂತ ಸೌಕರ್ಯಗಳ ವಿವರ | ಸಂಖ್ಯೆ |
|---|---|
| ತರಗತಿ ಕೊಠಡಿ | 5 |
| ಅಣಕು ನ್ಯಾಯಾಲಯ | 1 |
| ಪ್ರಾಂಶುಪಾಲರ ಕೊಠಡಿ | 1 |
| ಕಛೇರಿ | 1 |
| ಸಿಬ್ಬಂದಿ ಕೊಠಡಿ | 1 |
| ಶೌಚಾಲಯ (ಪುರುಷ) | 1 |
| ಮಹಿಳಾ ವಿಶ್ರಾಂತಿ ಕೊಠಡಿ | 1 |
| ಲಭ್ಯವಿರುವ Desks | 200 |

**ಸಂಖ್ಯೆ: ಲಾ - ಹೆಚ್‌ಆರ್‌ಎಮ್/155 /2022**

**(ಜೆ.ಸಿ. ಮಾಧುಸ್ವಾಮಿ)**
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

C-4